ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014-15 : ದಿನಾಂಕ: 14-11-2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | 61ನೇ ಅಖಿಲ ಭಾರತ ಸಹಕಾರ ಸಪ್ತಾಹ ವೃತ್ತಿ ಕೌಶಲ್ಯತೆ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ, ಯುವ ಜನತೆ ಮತ್ತು ಅಬಲ ವರ್ಗಗಳ ದಿನಾಚರಣೆ:<br><br>ಸಹಕಾರ ಸಪ್ತಾಹದ ಧ್ವಜಾರೋಹಣ, ಉದ್ಘಾಟನೆ ಹಾಗೂ ನಂದಿನಿ ಗೋಲ್ಡ್ ಪಶು ಆಹಾರ ಬಿಡುಗಡೆ:<br><br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ.<br><br>'ಸಹಕಾರ' ವಿಶೇಷ ಸಂಚಿಕೆ ಬಿಡುಗಡೆ:<br><br>ಶ್ರೀ ಡಿ.ವಿ. ಸದಾನಂದ ಗೌಡ,<br>ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವರು.<br><br>ಸಹಕಾರ ರತ್ನ ಪ್ರಶಸ್ತಿ ಪ್ರದಾನ:<br><br>ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್,<br>ಸಹಕಾರ ಹಾಗೂ ಸಕ್ಕರೆ ಸಚಿವರು.<br><br>ಅಧ್ಯಕ್ಷತೆ:<br>ಶ್ರೀ ಆರ್. ರೋಷನ್‌ಬೇಗ್<br>ಮೂಲಭೂತ ಸೌಕರ್ಯ ಅಭಿವೃದ್ಧಿ, ವಾರ್ತಾ, | 15-11-2014<br><br>ಶನಿವಾರ<br><br>ಬೆಳಿಗ್ಗೆ<br><br>10-30 ಗಂಟೆಗೆ | ನಳಪಾಡ್ ಪೆವಿಲಿಯನ್,<br>5ನೇ ದ್ವಾರ, ಪ್ಯಾಲೆಸ್ ಮೈದಾನ, ರಮಣ ಮಹರ್ಷಿ ರಸ್ತೆ,<br><br>ಬೆಂಗಳೂರು – 560 085. |

| | | | |
|---|---|---|---|
| | ಹಾಗೂ ಹಜ್ ಸಚಿವರು | | |
| 2. | ಪತ್ರಿಕಾಗೋಷ್ಠಿ<br>ಶ್ರೀ ದಿನೇಶ್ ಗುಂಡೂರಾವ್<br>ಆಹಾರ, ನಾಗರೀಕ, ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು | 15–11–2014<br>ಶನಿವಾರ<br>ಬೆಳಿಗ್ಗೆ<br>11–30 ಗಂಟೆಗೆ | ಕ್ಯಾಪಿಟಲ್ ಹೋಟೆಲ್,<br>ರಾಜಭವನ ರಸ್ತೆ,<br>ಬೆಂಗಳೂರು – 560 001. |
| 3. | ಪತ್ರಿಕಾಗೋಷ್ಠಿ:<br>ಶ್ರೀ ಹೆಚ್. ಆಂಜನೇಯ<br>ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು | 15–11–2014<br>ಶನಿವಾರ<br>ಮಧ್ಯಾಹ್ನ<br>12–30 ಗಂಟೆಗೆ | ಕೊಠಡಿ ಸಂಖ್ಯೆ 334,<br>ವಿಧಾನಸೌಧದ ಸಮ್ಮೇಳನ ಸಭಾಂಗಣ,<br>ಬೆಂಗಳೂರು. |
| 4 | ಸಾರ್ವಜನಿಕ ಗ್ರಂಥಾಲಯ ಇಲಾಖೆ<br>ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ–2014<br>ಪ್ರಶಸ್ತಿ ಪ್ರದಾನ ಸಮಾರಂಭ:<br>ಉದ್ಘಾಟನೆ:<br><br>ಶ್ರೀ ಸಂಗಮೇಶ ಉಪಾಸೆ,<br>ಉಪ ನಿಯಂತ್ರಕರು (ಹಣಕಾಸು)<br>ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ<br><br>ಅಧ್ಯಕ್ಷತೆ:<br><br>ಡಾ: ಸತೀಶ್‌ಕುಮಾರ್ ಎಸ್. ಹೊಸಮನಿ,<br>ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಖೆ<br><br>ಮುಖ್ಯ ಅತಿಥಿಗಳು:<br><br>ಶ್ರೀ ಶೂದ್ರ ಶ್ರೀನಿವಾಸ್,<br>ಖ್ಯಾತ ಸಾಹಿತಿ ಹಾಗೂ ಚಿಂತಕರು<br>ಶ್ರೀ ಕೆ.ಜಿ. ವೆಂಕಟೇಶ್,<br>ವಿಶ್ರಾಂತ ನಿರ್ದೇಶಕರು<br>ಸಾರ್ವಜನಿಕ ಗ್ರಂಥಾಲಯ ಇಲಾಖೆ | 15–11–2014<br>ಶನಿವಾರ<br>ಮಧ್ಯಾಹ್ನ<br>3–00 ಗಂಟೆಗೆ | ಇಂದಿರಾ ಪ್ರಿಯದರ್ಶಿನಿ ರಾಜ್ಯ ಮಕ್ಕಳ ಗ್ರಂಥಾಲಯ<br>ರಾಜ್ಯ ಕೇಂದ್ರ ಗ್ರಂಥಾಲಯ<br>ಕಬ್ಬನ್ ಉದ್ಯಾನವನ,<br>ಬೆಂಗಳೂರು |
| 5 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮನೆಯಂಗಳದಲ್ಲಿ ಮಾತುಕತೆ<br><br><u>ತಿಂಗಳ ಅತಿಥಿ:</u> | 15–11–2014<br><br>ಶನಿವಾರ | 'ನಯನ' ಸಭಾಂಗಣ'<br>ಕನ್ನಡ ಭವನ,<br>ಜೆ.ಸಿ. ರಸ್ತೆ, |

| | | | |
|---|---|---|---|
| | **ಡಾ. ಬಾನಂದೂರು ಕೆಂಪಯ್ಯ,**<br>**ಜಾನಪದ ಗಾಯನ ಗಾರುಡಿಗ** | **ಸಂಜೆ**<br>**4–00 ಗಂಟೆಗೆ** | **ಬೆಂಗಳೂರು** |

**ನಿರ್ದೇಶಕರ ಪರವಾಗಿ**

**ಸಮ:ಬಾಬು:ಜಿಪಿಆರ್.**

# ಮಾಧ್ಯಮ ಸಂಸ್ಥೆಗಳ ಮುಖ್ಯಸ್ಥರ ಗಮನಕ್ಕೆ

ಬೆಳಗಾವಿಯಲ್ಲಿ ಡಿಸೆಂಬರ್ 9 ರಿಂದ 20 ರ ವರೆಗೆ ನಡೆಯಲಿರುವ ರಾಜ್ಯ ವಿಧಾನ ಮಂಡಲ ಅಧಿವೇಶನದ ವರದಿಗಾಗಿ ಹಾಜರಾಗ ಬಯಸುವ ಸುದ್ದಿವಾಹಿನಿಗಳು ಹಾಗೂ ರಾಜ್ಯಮಟ್ಟದ ದಿನಪತ್ರಿಕೆಗಳ ***ಮಾನ್ಯತೆ ಪಡೆದ*** ಪ್ರತಿನಿಧಿಗಳ ವಿವರಗಳನ್ನು ಸಂಸ್ಥೆಯ ಶೀರ್ಷಿಕಾ ಪತ್ರ(ಲೆಟರ್‌ಹೆಡ್)ದಲ್ಲಿ ನಮೂದಿಸಿ ಸಲ್ಲಿಸಲು ಕೋರಲಾಗಿದೆ.

ಈ ಕೆಳಗೆ ನೀಡಿರುವ ನಮೂನೆಯ ಮಾದರಿಯಲ್ಲಿ ವಿವರಗಳನ್ನು ಒದಗಿಸಿ, ಸಂಸ್ಥೆಯ ಮುಖ್ಯಸ್ಥರೇ ಶಿಫಾರಸು ಮಾಡಿರಬೇಕು. ಮುದ್ರಣ ಮಾಧ್ಯಮದ ಗರಿಷ್ಠ ನಾಲ್ಕು ಪ್ರತಿನಿಧಿಗಳು ಹಾಗೂ ವಿದ್ಯುನ್ಮಾನ ಮಾಧ್ಯಮದ ವರದಿಗಾರರು, ಕ್ಯಾಮರಾಮನ್ ಸೇರಿದಂತೆ ಗರಿಷ್ಠ 8 ಪ್ರತಿನಿಧಿಗಳಿಗೆ ಮಾತ್ರ ವಾಸ್ತವ್ಯ ವ್ಯವಸ್ಥೆ ಕಲ್ಪಿಸಲಾಗುವುದು. ಈ ಶಿಫಾರಸು ಪತ್ರ ಸಲ್ಲಿಸಲು ನವೆಂಬರ್ 25 ಕೊನೆಯ ದಿನವಾಗಿದೆ.

ವಿ.ಸೂ:

1. ಹಿಂದಿನ ಅಧಿವೇಶನದಲ್ಲಿ ಒದಗಿಸಿರುವ ಪ್ರವೇಶ ಪತ್ರ ಈ ಅಧಿವೇಶನಕ್ಕೂ ಅನ್ವಯವಾಗುತ್ತದೆ. ಹೊಸದಾಗಿ ಪ್ರವೇಶ ಪತ್ರ ನೀಡಲಾಗುವುದಿಲ್ಲ.
2. ತಡವಾಗಿ ಬಂದ ಮನವಿಗಳನ್ನು ಪುರಸ್ಕರಿಸಲು ಸಾಧ್ಯವಿಲ್ಲ.

ನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಗೆ,

ನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಬೆಂಗಳೂರು

ಮಾನ್ಯರೇ,

ವಿಷಯ: ವಿಧಾನ ಮಂಡಲ ಅಧಿವೇಶನ ವರದಿಗೆ ಪ್ರತಿನಿಧಿಗಳನ್ನು ನಿಯೋಜಿಸುವ ಬಗ್ಗೆ

ಬೆಳಗಾವಿಯಲ್ಲಿ ನಡೆಯಲಿರುವ ವಿಧಾನ ಮಂಡಲ ಅಧಿವೇಶನಕ್ಕೆ ನಮ್ಮ ಮಾಧ್ಯಮ ಸಂಸ್ಥೆಯಿಂದ ಈ ಕೆಳಕಂಡ ವರದಿಗಾರರು/ ಕ್ಯಾಮರಾಮನ್‌ಗಳನ್ನು ನಿಯೋಜಿಸಲಾಗಿದೆ.

ವಿಧಾನಸಭೆ ವರದಿ ಮಾಡುವ ವರದಿಗಾರರು/ ಕ್ಯಾಮರಾಮನ್‌ಗಳು:

| ಕ್ರ.ಸಂ. | ಹೆಸರು, ಪದನಾಮ | ಮಾನ್ಯತಾ ಪತ್ರ ಸಂಖ್ಯೆ | ಮೊಬೈಲ್ ಸಂಖ್ಯೆ |
|---|---|---|---|
| 1 | | | |
| 2 | | | |

ವಿಧಾನ ಪರಿಷತ್ ಕಲಾಪ ವರದಿ ಮಾಡುವ ವರದಿಗಾರರು/ ಕ್ಯಾಮರಾಮನ್‌ಗಳು:

| ಕ್ರ.ಸಂ. | ಹೆಸರು, ಪದನಾಮ | ಮಾನ್ಯತಾ ಪತ್ರ ಸಂಖ್ಯೆ | ಮೊಬೈಲ್ ಸಂಖ್ಯೆ |
|---|---|---|---|
| 1 | | | |
| 2 | | | |

ಸ್ಥಳ: ಸಂಸ್ಥೆಯ ಮುಖ್ಯಸ್ಥರು

ದಿನಾಂಕ:

# ಪತ್ರಿಕಾ ಪ್ರಕಟಣೆ

# ಕಬ್ಬು: ನಿಗದಿತ ದರ ಪಾವತಿಸಲು ಸಕ್ಕರೆ ಕಾರ್ಖಾನೆಗಳಿಗೆ ನೋಟಿಸ್

**ಬೆಂಗಳೂರು, 14 ನೇ ನವೆಂಬರ್ (ಕರ್ನಾಟಕ ವಾರ್ತೆ)**

ಕಬ್ಬು ನಿಯಂತ್ರಣ ಮಂಡಳಿ 2013–14 ನೇ ಸಾಲಿಗೆ ನಿಗದಿಪಡಿಸಿರುವ ದರವನ್ನು ಕೂಡಲೇ ಪಾವತಿಸುವಂತೆ ಬಾಕಿ ಉಳಿಸಿಕೊಂಡ 56 ಸಕ್ಕರೆ ಕಾರ್ಖಾನೆಗಳಿಗೆ ನೋಟೀಸ್ ನೀಡಲಾಗಿದೆ.

ಕಬ್ಬು ನಿಯಂತ್ರಣ ಮಂಡಳಿಯು ಅಧಿಸೂಚನೆ ದಿನಾಂಕ 23.11.2013 ರಂತೆ 2013–14 ನೇ ಸಾಲಿನ ಪ್ರತಿ ಮೆಟ್ರಿಕ್ ಟನ್ನಿಗೆ ಕಬ್ಬು ದರ ಉತ್ತರ ಕರ್ನಾಟಕ ಭಾಗದ ಸಕ್ಕರೆ ಕಾರ್ಖಾನೆಗಳಿಗೆ ರೂ 2500/– ಎಕ್ಸ್–ಫೀಲ್ಡ್ ಮತ್ತು ದಕ್ಷಿಣ ಕರ್ನಾಟಕ ಭಾಗದ ಸಕ್ಕರೆ ಕಾರ್ಖಾನೆಗಳಿಗೆ ರೂ 2500/– ಎಕ್ಸ್–ಗೇಟ್ ದರವನ್ನು

ನಿಗದಿಪಡಿಸಿತ್ತು. ಈ ರೀತಿ ನಿಗದಿಪಡಿಸಿದ ಅಧಿಸೂಚನೆಯನ್ನು ಪ್ರಶ್ನಿಸಿ ಕೆಲವು ಸಕ್ಕರೆ ಕಾರ್ಖಾನೆಗಳು ಗೌರವ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ದಾಖಲಿಸಿದ್ದವು. ಉಚ್ಛ ನ್ಯಾಯಾಲಯವು ರಿಟ್ ಅರ್ಜಿಗಳನ್ನು ವಜಾಗೊಳಿಸಿ ದಿನಾಂಕ **06-11-2014** ರಂದು ತೀರ್ಪು ನೀಡಿರುತ್ತದೆ ಮತ್ತು ಕಬ್ಬು ನಿಯಂತ್ರಣ ಮಂಡಳಿಯು ನಿಗದಿಪಡಿಸಿದ ದರವನ್ನು ಪಾವತಿಸಲು ಸೂಚಿಸಿ ಸಕ್ಕರೆ ಕಾರ್ಖಾನೆಗಳು ರೈತರಿಗೆ ಪಾವತಿಸಲು ಬಾಕಿ ಇರುವ ಮೊತ್ತವನ್ನು ತಕ್ಷಣ ಪಾವತಿಸುವಂತೆ ನಿರ್ದೇಶಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಬಾಕಿ ಉಳಿಸಿಕೊಂಡ **56** ಸಕ್ಕರೆ ಕಾರ್ಖಾನೆಗಳಿಗೆ ನೋಟೀಸ್ ನೀಡಿ ಬಾಕಿ ಮೊತ್ತವನ್ನು ತಕ್ಷಣ ಪಾವತಿಸಲು ಸೂಚಿಸಲಾಗಿದೆ ಎಂದು ಕಬ್ಬು ಅಭಿವೃದ್ಧಿ ಆಯುಕ್ತರು ಹಾಗೂ ಸಕ್ಕರೆ ನಿರ್ದೇಶನಾಲಯದ ಪ್ರಕಟಣೆ ತಿಳಿಸಿದೆ.

ಸಮ/ಬಾಬು/ಜಿಪಿಆರ್/ಕೆಎಂ

# 'ಯಾವುದೇ ವೃತ್ತಿಯಲ್ಲಿ ತೊಡಗಿದರೂ ತಮ್ಮ ಸೇವೆಯನ್ನು ದೇಶಕ್ಕೇ ಮುಡಿಪಾಗಿಡಿ'

ಬೆಂಗಳೂರು; ನವೆಂಬರ್ 14,: (ಕರ್ನಾಟಕ ವಾರ್ತೆ)

ಯಾವುದೇ ವೃತ್ತಿಯಲ್ಲಿ ತೊಡಗಿದರರೂ ತಮ್ಮ ಸೇವೆಯನ್ನ ದೇಶ ಸೇವೆಗೆ ಮುಡಿಪಾಗಿಡುವಂತೆ ರಾಜ್ಯಪಾಲ ಶ್ರೀ ವಜುಭಾಯಿ ವಾಲಾ ಅವರು ಮಕ್ಕಳಿಗೆ ಕರೆ ನೀಡಿದರು.

ಮಕ್ಕಳ ದಿನಾಚರಣೆಯ ಪ್ರಯುಕ್ತ, ಮಹಿಳಾ ಮತ್ತು ಅಭಿವೃದ್ಧಿ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಶಿಶು ಕಲ್ಯಾಣ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ಏರ್ಪಡಿಸಲಾಗಿದ್ದ, ಕಾರ್ಯಕ್ರಮದಲ್ಲಿ ಸಮಯ ಪ್ರಜ್ಞೆ ಹಾಗು ಶೌರ್ಯದಿಂದ ಇತರರ ಪ್ರಾಣ ರಕ್ಷಣೆ ಮಾಡಿದ ಮಕ್ಕಳಿಗೆ ಶೌರ್ಯ ಪ್ರಶಸ್ತಿಯನ್ನು ವಿತರಿಸಿ ಮಕ್ಕಳನ್ನುದ್ದೇಶಿಸಿ ಮಾತನಾಡಿದ ಅವರು, ಮಕ್ಕಳಿಗೆ ನೀವು ಡಾಕ್ಟರ್ ಆಗಿ, ಇಂಜಿನಿಯರ್ ಆಗಿ, ಇಲ್ಲ ಯಾವುದೇ ವೃತ್ತಿಯನ್ನು ಆರಿಸಿಕೊಂಡರೂ, ವಿದೇಶಕ್ಕೆ ತೆರಳದೆ ನಮ್ಮ ದೇಶದಲ್ಲಿಯೇ ಇದ್ದು, ದೇಶ ಅಭಿವೃದ್ದಿಗಾಗಿ ಹಾಗೂ ಬಡಜನರ ಸೇವೆಗಾಗಿ ತಮ್ಮ ಸೇವೆಯನ್ನು ಮುಡುಪಾಗಿಡುವಂತೆ ಮಕ್ಕಳಿಗೆ ಮನವಿ ಮಾಡಿದರು.

ಪೋಷಕರೂ ಸಹ ತಮ್ಮ ಮಕ್ಕಳನ್ನು ಹೆಚ್ಚಿನ ಹಣಗಳಿಕೆಯ ಉದ್ದೇಶದಿಂದ ವಿದೇಶಕ್ಕೆ ಕಳುಹಿಸದೇ ದೇಶ ಸೇವೆಗೆ ಮಕ್ಕಳನ್ನು ಪ್ರೇರೇಪಿಸಬೇಕು. ಇಂದಿನ ಮಕ್ಕಳು ತುಂಬಾ ಜಾಣರಿದ್ದು, ಕಂಪ್ಯೂಟರ್‌ಗಿಂತಲೂ ಅವರು ಚುರುಕಾಗಿದ್ದಾರೆ. ಆದ್ದರಿಂದ ಅವರನ್ನು ಡಾಕ್ಟರ್ ಅಥವಾ ಇಂಜಿನಿಯರ್ ಮಾಡಬೇಕೆಂದು ಒತ್ತಡಹೇರುವ ಬದಲು ಅವರ ಆಸಕ್ತರಾಗಿರುವ ಕ್ಷೇತ್ರದಲ್ಲಿ ಬೆಳೆಯಲು ಅವಕಾಶ ಒದಗಿಸುವ ಮೂಲಕ ನಮ್ಮ ಮಕ್ಕಳೂ ಮಹಾತ್ಮಾಗಾಂಧಿ, ನೆಹರು, ಸುಭಾಷ್ ಚಂದ್ರಬೋಸ್, ಸರ್ದಾರ್ ವಲ್ಲಭ ಭಾಯಿ ಪಟೇಲ್,ರಂತಹ ಮಹಾನ್ ವ್ಯಕ್ತಿಗಳಂತಾಗಲು ಅವಕಾಶ ಮಾಡಿಕೊಡಬೇಕೆಂದರು.

ಈಗಿನ ಮಕ್ಕಳಿಗೆ ವಿದೇಶಿ ತಿನಿಸು, ಪೇಯಗಳು ಹಾಗೂ ವಿದೇಶಿ ಶೈಲಿಯ ಬಟ್ಟೆಗಳು ಇಷ್ಟವಾಗುತ್ತಿದೆ. ಇದರಿಂದ ನಮ್ಮ ಸ್ವದೇಶಿ ಆಹಾರ ಸಂಸ್ಕೃತಿ ಕಣ್ಮರೆಯಾಗುತ್ತಿದೆ. ಆದ್ದರಿಂದ ಮಕ್ಕಳಿಗೆ ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕುರಿತು ತಂದೆ ತಾಯಂದಿರು ಅರಿವನ್ನು ಮೂಡಿಸುವಂತೆ ತಿಳಿಸಿದರು.

ಇಂದಿನ ಒತ್ತಡದ ಜೀವನ ಶೈಲಿಯಿಂದಾಗಿ ಶಾಲೆಯಲ್ಲಿ ಮಕ್ಕಳಿಗೆ ಶಿಕ್ಷಕರು ನೀಡುವಷ್ಟು ವೇಳೆಯನ್ನು ಪೋಷಕರು ತಮ್ಮ ಮಕ್ಕಳಿಗೆ ನೀಡುವುದುದರಿಂದ ಮಕ್ಕಳಮೇಲಿ ದೌರ್ಜನ್ಯ ಹೆಚ್ಚಾಗಲು ಕಾರಣವಾಗಿದೆ.ಆದ್ದರಿಂದ ತಂದೆ ತಾಯಂದಿರು ತಮ್ಮ ಮಕ್ಕಳ ಕಡೆಗೆ ಹೆಚ್ಚಿನ ಗಮನ ಕೊಡುವ ಜೊತೆಗೆ ನಮ್ಮ ಸಂಸ್ಕಾರವನ್ನು ಮಕ್ಕಳಿಗೆ ಕಲಿಸಬೇಕಿದೆ ಎಂದರು.

ವಿದ್ಯೆಯಿಂದ ಸಂಸ್ಕಾರ ಬೆಳೆಯುವುದರಿಂದ ಸರ್ಕಾರದಿಂದ ಬಡ ಮಕ್ಕಳಿಗೆ ಉಚಿತ ವಿಧ್ಯಾಭ್ಯಾಸ, ಪಠ್ಯಪುಸ್ತಕ, ಸಮವಸ್ತ್ರ, ಊಟವನ್ನು ನೀಡುವ ಮೂಲಕ ಮಕ್ಕಳಿಗೆ ಉತ್ತೇಜನವನ್ನು ನೀಡಲಾಗುತ್ತಿದೆ. ನಮ್ಮ ದೇಶದ ಶ್ರೀಮಂತರೆಲ್ಲರೂ ಒಬ್ಬ ಬಡ ಮಗುವಿಗೆ ಶಿಕ್ಷಣವನ್ನು ನೀಡಿದರೆ ನಮ್ಮ ದೇಶ ಸಂಪೂರ್ಣ ಸಾಕ್ಷರತೆಯನ್ನು ಹೊಂದುವುದೆಂದು ಅವರು ಅಭಿಪ್ರಾಯಪಟ್ಟರು.

ನಮ್ಮ ಸುತ್ತಮುತ್ತಲ ಜನರನ್ನು ಪ್ರೀತಿಸಬೇಕು. ನಾವು ಪ್ರೀತಿ ಕೊಟ್ಟರೆ ಅವರೂ ನಮಗೆ ಪ್ರೀತಿಯನ್ನು ನೀಡುತ್ತಾರೆ. ದ್ವೇಷಿಸಿದರೆ ಅವರೂ ನಮ್ಮನ್ನು ದ್ವೇಷಿಸುತ್ತಾರೆ. ಪ್ರೀತಿಯಿಂದ ಶಾಂತಿ ಸೌಹಾರ್ದತೆಯನ್ನು ಕಾಪಾಡಬಹುದಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ಇರುವಂತೆ ರಾಜ್ಯಪಾಲರು ಹೇಳಿದರು.

ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಪ್ರತಿಭೆಯನ್ನು ಹೊಂದಿರುವ 13 ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ವಿತರಿಸಿ ಮಾತನಾಡಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಶ್ರೀಮತಿ ಉಮಾಶ್ರೀ ಅವರು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ತನ್ನ ಪ್ರಾಣವನ್ನು ಪಣಕ್ಕಿಟ್ಟು ಹೋರಾಟ ಮಾಡಿದ ಮಲಾಲಾಗೆ ನೊಬೆಲ್ ಪ್ರಶಸ್ತಿ ದೊರಕಿರುವುದು ಶ್ಲಾಘನೀಯ ಎಂದರು.

ಮಕ್ಕಳ ಸಂರಕ್ಷಣೆ ಸರ್ಕಾರದ ಜವಾಬ್ದಾರಿಯಾಗಿದ್ದು, ಇತ್ತೀಚೆಗೆ ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ಕಿರುಕುಳ ತಡೆಗಟ್ಟುವ ಸಲುವಾಗಿ ಗೂಂಡಾ ಕಾಯ್ದೆಯಡಿ ಕಠಿಣ ಶಿಕ್ಷೆಯನ್ನು ನೀಡಲು ಸರ್ಕಾರವು ಕ್ರಮ ಜರುಗಿಸಲಿದೆ ಹಾಗೂ ಎಲ್ಲಾ ಶಾಲೆಗಳಿಗೂ ಮಾರ್ಗಸೂಚಿಯನ್ನು ಅಳವಡಿಸಲು ಸೂಚಿಸಲಾಗಿದೆ. ಮಕ್ಕಳ ರಕ್ಷಣೆಗೆ ಸರ್ಕಾರದ ಜೊತೆಗೆ ಪೋಷಕರು, ಸಮಾಜದ ಎಲ್ಲಾ ವರ್ಗದವರು ಸಹಕಾರ ನೀಡುವಂತೆ ಸಚಿವರು ಮನವಿ ಮಾಡಿದರು.

ಮಹಿಳಾ ಮತ್ತು ಮಕ್ಕಳ ಕಲಾಣ್ಯ ಸಮಿತಿ ಅಧ್ಯಕ್ಷರಾದ ಶ್ರೀಮತಿ ಶಕುಂತಲಾ ಟಿ. ಶೆಟ್ಟಿ ಅವರು ಮಕ್ಕಳ ದಿನಾಚರಣೆಯ ಬಾವುಟ ಬಿಡುಗಡೆ ಮಾಡಿದರು. ಈ ಸಮಾರಂಭದಲ್ಲಿ ಸಾರಿಗೆ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ರಾಮಲಿಂಗ ರೆಡ್ಡಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಶ್ರೀ ಕಿಮ್ಮನೆ ರತ್ನಾಕರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಎಂ. ವಿ. ಜಯಂತಿ, ನಿರ್ದೇಶಕರಾದ ಶ್ರೀಮತಿ ಎನ್.ಟಿ. ಅಬ್ರೂ ಅವರು ಉಪಸ್ಥಿತರಿದ್ದರು.

ಸಮ:ಬಿಜಿಪಿ:ಜಿಪಿಆರ್

## ಒಂಬತ್ತು ಮಕ್ಕಳಿಗೆ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ

ಬೆಂಗಳೂರು; ನವೆಂಬರ್ 14,: (ಕರ್ನಾಟಕ ವಾರ್ತೆ)

ಧೈರ್ಯ ಸಾಹಸ ಹಾಗೂ ಸಮಯ ಪ್ರಜ್ಞೆಯಿಂದ ಇತರರ ಪ್ರಾಣವನ್ನು ರಕ್ಷಿಸಿದ 6 ರಿಂದ 15 ವರ್ಷ ವಯೋಮಿತಿ ಒಳಗಿನ  ಒಂಬತ್ತು ಮಕ್ಕಳಿಗೆ ಘನತೆವೆತ್ತ ರಾಜ್ಯಪಾಲರು ಇಂದು ರವೀಂದ್ರ ಕಲಾಕ್ಷೇತ್ರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಏರ್ಪಡಿಸಿದ್ದ ಮಕ್ಕಳ ದಿನಾಚರಣೆ ಸಮಾರಂಭದಲ್ಲಿ 2014–15 ನೇ ಸಾಲಿನ ಶೌರ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿದರು.

ಶಿವಮೊಗ್ಗ ಜಿಲ್ಲೆಯ ಮಾಸ್ಟರ್ ದೀಕ್ಷಿತ್ ಜಿ.ಪಿ. ತುಮಕೂರಿನ ಮಾಸ್ಟರ್ ಕಿಶನ್ ಜಿ.ಕೆ, ಬಾಗಲಕೋಟೆಯ ಮಾಸ್ಟರ್ ಸುಮಿತ ಕುಮಾರ್ ಸಿಂದಗಿ,  ಬಿಜಾಪುರದ ಕುಮಾರಿ ಪೂರ್ಣಿಮಾ ಎಡವೆ, ಚಾಮರಾಜನಗರದ ಮಾಸ್ಟರ್ ಅನೂಪ್ ಕೆ.ಆರ್. ಮಾಸ್ಟರ್ ಸ್ವರೂಪ್ ಕೆ.ಆರ್. ಮಾಸ್ಟರ್ ಬಿ. ಅಪ್ಪು, ಕೊಡಗಿನ ಕುಮಾರಿ, ಶಾಂತಿ ಕೆ.ಎಂ. ಹಾಗೂ ರಾಮನಗರದ ಮಾಸ್ಟರ್ ಸಹನೇಶ್ ಆರ್ ಇವರುಗಳು ತಾವು ಪ್ರದರ್ಶಿಸಿದ ಸಾಹಸಕ್ಕಾಗಿ ರಾಜ್ಯಪಾಲರಿಂದ ಶೌರ್ಯ ಪ್ರಶಸ್ತಿಯನ್ನು ಪಡೆದುಕೊಂಡರು.